# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1464 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಅನೇಕ ಬಡಾವಣೆಗಳಲ್ಲಿ ವಸತಿ ಉದ್ದೇಶದ ನಿವೇಶನಗಳಲ್ಲಿ ವಾಣಿಜ್ಯ ಕಟ್ಟಡಗಳು, ಪಿ.ಜಿ ಹೀಗೆ ಅನೇಕ ಮಾದರಿಯ ವಾಣಿಜ್ಯ ಚಟುವಟಿಕೆಗಳನ್ನು ಪ್ರಾರಂಭಿಸಿರುವುದರಿಂದ ಇಲ್ಲಿಯ ನಿವಾಸಿಗಳಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| ಆ) | ವಾರ್ಡ್ ಸಂಖ್ಯೆ 18ರ ಸ್ವತ್ತಿನ ಸಂಖ್ಯೆ 2/1, ದೇವಸಂದ್ರ ಸರ್ವೆ ನಂ. 34/1 ರಾಧಕೃಷ್ಣ ದೇವಸ್ಥಾನದ ಹತ್ತಿರ ಬೆಂಗಳೂರು ಪಿ.ಐ.ಡಿ ನಂ: 100-371-2/1 ರಲ್ಲಿ ವಸತಿ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಪಡೆದು ಅದರ ಅನ್ವಯ ನಿರ್ಮಾಣ ಮಾಡದೆ ಪಿ.ಜಿಗಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕುರಿತು ಸುತ್ತಮುತ್ತಲಿನ ನಿವಾಸಿಗಳು ದೂರು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಇ) | ಬಂದಿದ್ದಲ್ಲಿ ಈ ದೂರಿನ ಕುರಿತು ದಿನಾಂಕ: 30.05.2024 ರಂದು ಸಹಾಯಕ ನಿರ್ದೇಶಕರು, ನಗರ ಯೋಜನೆ ಪೂರ್ವ ಇವರು ನಕ್ಷೆ ಉಲ್ಲಂಘಿಸಿ, ಕಟ್ಟುತ್ತಿರುವ ಕಟ್ಟಡದ ಮಾಲೀಕರಿಗೆ ತಿಳುವಳಿಕೆ ಪತ್ರವನ್ನು ನೀಡಿದ್ದು ಅದಾಗ್ಯೂ ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಕಾರ್ಯವನ್ನು ಮುಂದುವರೆಸಿದ್ದು, ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಬಗ್ಗೆ ಯಾವುದೇ ಕ್ರಮಕೈಗೊಳ್ಳದಿರಲು ಕಾರಣವೇನು; | 1) Benchmarc Coliving Spaces Pvt. Ltdನ ನಿರ್ದೇಶಕರಾದ ಶ್ರೀ ಎಂ.ಎಸ್. ಸಂಜಯ್ ರವರು ದಿನಾಂಕ:30.06.2023 ರಂದು ವಸತಿ ಕಟ್ಟಡ ನಿರ್ಮಿಸಲು ಅರ್ಜಿ ಸಲ್ಲಿಸಿದ್ದು, ದಿನಾಂಕ:01.07.2023 ರಂದು ಸ್ಟಿಲ್ಟ್ + ನೆಲ + 1ನೇ + 2ನೇ + 3ನೇ ಅಂತಸ್ತಿಗೆ ನಕ್ಷೆ ಮಂಜೂರಾತಿ ನೀಡಲಾಗಿದೆ. ತದನಂತರ ದಿನಾಂಕ: 18.11.2023 ರಂದು ಸ್ಟಿಲ್ಟ್ + ನೆಲ + 1ನೇ + 2ನೇ ಅಂತಸ್ತಿಗೆ ಮಾರ್ಪಾಟು ನಕ್ಷೆ ಮಂಜೂರಾತಿ ಪಡೆದಿರುತ್ತಾರೆ. ದಿನಾಂಕ:07.05.2024 ರಂದು ಸುತ್ತಮುತ್ತಲಿನ ರಸ್ತೆಯ ಸ್ಥಳೀಯ ನಿವಾಸಿಗಳು, ಸದರಿ ಕಟ್ಟಡದ ಮಾಲೀಕರು ಈಗಾಗಲೇ ಸ್ವತ್ತಿನ ಮುಂಭಾಗದಲ್ಲಿ ಪಿ.ಜಿ ಕಟ್ಟಡ ನಿರ್ಮಿಸುತ್ತಿದ್ದು, ಈ ಸ್ವತ್ತಿನಲ್ಲಿಯೂ ಸಹ ಪಿ.ಜಿ ನಿರ್ಮಿಸುತ್ತಿರುವುದಾಗಿ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲು ದೂರು ನೀಡಿರುತ್ತಾರೆ. |

. . .2.

| | | |
|---|---|---|
| | | 2) ಈ ದೂರಿನ ಬಗ್ಗೆ ದಿನಾಂಕ:30.05.2024 ರಂದು ಸಹಾಯಕ ನಿರ್ದೇಶಕರು ನಗರ ಯೋಜನೆ (ಪೂರ್ವ) ಕಟ್ಟಡದ ಮಾಲೀಕರಿಗೆ ನಕ್ಷೆ ಉಲ್ಲಂಘನೆ ಮಾಡಬಾರದಾಗಿ ವಸತಿ ಯೋಜನೆಗಳಿಗೆ ಮಾತ್ರ ಬಳಸಲು ತಿಳುವಳಿಕೆ ಪತ್ರ ನೀಡಲಾಗಿರುತ್ತದೆ. ತದನಂತರ, ಕಟ್ಟಡದ ಮಾಲೀಕರು ದಿನಾಂಕ:20.07.2024 ರಂದು ಅರ್ಜಿ ಸಲ್ಲಿಸಿ ದಿನಾಂಕ:26.07.2024 ರಂದು ಸ್ಟಿಲ್ಟ್ + ನೆಲ + 1ನೇ + 2ನೇ ಅಂತಸ್ತುಗಳ ಹಾಸ್ಟೆಲ್ ಕಟ್ಟಡಕ್ಕೆ ದಿನಾಂಕ:26.07.2024 ಮರು ಮಾರ್ಪಾಡು ನಕ್ಷೆ ಪಡೆದಿರುತ್ತಾರೆ.<br>3) ಸದರಿ ಕಟ್ಟಡವನ್ನು ಮಂಜೂರಾದ ನಕ್ಷೆಯಂತೆ ನಿರ್ಮಾಣ ಮಾಡುತ್ತಿರುವುದರಿಂದ ಪಾಲಿಕೆಯಿಂದ ದಿನಾಂಕ: 25.09.2024 ರಂದು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿರುತ್ತದೆ. ಪ್ರಸ್ತುತ ಸದರಿ ಕಟ್ಟಡವನ್ನು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣ ಮಾಡುತ್ತಿರುವುದು ಕಂಡುಬಂದಿದ್ದು, ಬಿ.ಬಿ.ಎಂ.ಪಿ. ಕಾಯ್ದೆ 2020ರ ಕಲಂ 248 (1), 248 (2) & 248 (3) ಹಾಗೂ 356 (1) ಮತ್ತು 356 (2) ರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಇಂತಹ ಸಾರ್ವಜನಿಕ ದೂರುಗಳನ್ನು ಬಳಕೆ ಮಾಡಿಕೊಂಡು ನಕ್ಷೆ ಉಲ್ಲಂಘನೆ ಮಾಡುವ ಕಟ್ಟಡ ಮಾಲೀಕರುಗಳಿಂದ ಹಣ ವಸೂಲಿ ಮಾಡುವುದು ದಂಧೆಯಾಗಿದ್ದು; ಕಟ್ಟಡ ನಿರ್ಮಾಣ ಮಾಡಲು ಸಹಕಾರ ನೀಡುವಂತಹ ಅಧಿಕಾರಿಗಳ ವಿರುದ್ಧ ಯಾವ ಕಾಲಮಿತಿಯೊಳಗೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು; | ಇಂತಹ ಸಾರ್ವಜನಿಕ ದೂರುಗಳನ್ನು ಬಳಕೆ ಮಾಡಿಕೊಂಡು ನಕ್ಷೆ ಉಲ್ಲಂಘನೆ ಮಾಡಿರುವ ಕಟ್ಟಡದ ಮಾಲೀಕರಿಂದ ಹಣ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ. |
| ಉ) | ನಕ್ಷೆ ಉಲ್ಲಂಘಿಸಿ ನಿರ್ಮಾಣ ಮಾಡುತ್ತಿರುವ ಕಟ್ಟಡ ಕಾಮಗಾರಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೂಡಲೇ ತಡೆಗಟ್ಟಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು? | ನಕ್ಷೆ ಉಲ್ಲಂಘಿಸಿ ನಿರ್ಮಾಣ ಮಾಡುತ್ತಿರುವ ಕಟ್ಟಡ ಕಾಮಗಾರಿಯನ್ನು ಕೂಡಲೇ ತಡೆಗಟ್ಟಲು ಬಿ.ಬಿ.ಎಂ.ಪಿ. ಕಾಯ್ದೆ 2020ರ ಕಲಂ 248 (1), 248 (2), 248 (3) + 356 (1) ಮತ್ತು 356 (2) ರಂತೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ನಅಇ 117 ಎಂಎನ್‌ಯು 2025**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ